( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ಅಸಲು ದಾವೆ ನಂ.272/2015**

**ದಿನಾಂಕಃ 03-07-2023, ಪಿ ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಆರ್ ಸಿ ವಕೀಲರಿಂದಃ

ಜಯಮ್ಮ ರವರ ತವರು ಮನೆ ಮುತ್ತಿಗೆ ಗ್ರಾಮ, ಅವರ ಅಕ್ಕ ಪುಟಾಣಿ ಎಂದರೆ ಸರಿ. ಜಯಮ್ಮ ರವರು ಮುತ್ತಿಗೆ ಗ್ರಾಮ ದಲ್ಲಿ ಹುಟ್ಟಿ ಅಲ್ಲಿಯೇ ಹೊಸ ಮನೆ ನಿರ್ಮಿಸಿಕೊಂಡು ವಾಸ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮೊದಲನೆ ಮಗ ರಂಗಸ್ವಾಮಿ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡನ ಹೆಸರು ಹಾಗೂ 2 ಮತ್ತು 3 ನೇ ಪ್ರತಿವಾದಿಗಳ ತಂದೆಯ ಹೆಸರು ಈರಯ್ಯ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಈರಯ್ಯ ಉಃ ಮೊಗಪ್ಪ ಎಂಬ ಎರಡು ಹೆಸರು ಇದೆ ಎಂದು ನುಡಿಯುತ್ತಾರೆ.

ನಾನು ಪ್ರತಿವಾದಿಗಳ ವಿರುದ್ಧ ನನ್ನ ಜಮೀನನ್ನು ಉಳುಮೆ ಮಾಡುವಾಗ ತಕರಾರು ಮಾಡಿರುವುದಕ್ಕೆ ದಾವೆಯನ್ನು ಹೂಡಿರುತ್ತೇನೆ. ನಾನು ಸರ್ವೆ ನಂ. 130/3 ರ ಜಮಿನಿಗೆ ದಾವೆ ಹೂಡಿರುತ್ತೇನೆ. ಸದರಿ ಜಮೀನಿನ ಚೆಕ್ಕುಬಂದಿ ನನಗೆ ಅಲ್ಪಸ್ವಲ್ಪ ಗೊತ್ತು.

ದಾವಾ ಆಸ್ತಿಯ 1 ಎಕರೆ 17 ಗುಂಟೆ ಜಮೀನಿನ ಪೈಕಿ 19 ಗುಂಟೆ ಜಮೀನನ್ನು ನಾನು 1 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮನ ಹೆಸರು ಬೊಮ್ಮಯ್ಯ ಎಂದರೆ ಸರಿ. ದಿಃ 29-05-1995 ರ ಒಪ್ಪಿಗೆ ಪತ್ರ ಬರೆದುಕೊಡುವ ಸಮಯದಲ್ಲಿ ನನ್ನ ತಮ್ಮ ಬೊಮ್ಮಯ್ಯ ಬದುಕಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ. (ವಾದಿ ಪರ ವಕೀಲರು ದಿಃ 29-05-1995 ರ ಒಪ್ಪಿಗೆ ಪತ್ರದ ಬಗ್ಗೆ ಪ್ರತಿವಾದಿ ಪತ್ರದಲ್ಲಿ ಹೇಳದೇ ಇರುವುದರಿಂದ ಪ್ರಶ್ನೆಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ, ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಪ್ರಶ್ನೆ ತೆಗೆದುಕೊಳ್ಳಲಾಯಿತು)

ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಮಳ್ಳಯ್ಯ ದೊಡ್ಡಯ್ಯ ಹಾಗೂ ದ್ಯಾವಯ್ಯನ ಸ್ವಾಮಿ ಜಮೀನು ಇದೆ ಎಂದರೆ ಸರಿ. ದ್ಯಾವಯ್ಯನ ಸ್ವಾಮಿ ರವರನ್ನು ದ್ಯಾವ ಎಂಬ ಹೆಸರಿನಿಂದಲೂ ಕರೆಯುತ್ತಾರೆ ಎಂದರೆ ಸರಿ.

ಸರ್ವೆ ನಂ. 130/3 ರ ದಕ್ಷಿಣ ದಿಕ್ಕಿಗೆ ಬೊಮ್ಮಯ್ಯ ಮತ್ತು ಜವರಯ್ಯ ಇಬ್ಬರೂ ಇದ್ದಾರೆ. ದಾವಾ ಸರ್ವೆ ನಂ. 130/3 ರ 38 ಗುಂಟೆ ಜಮೀನಿನ ಪೂರ್ವಕ್ಕೆ ವೆಂಕಟೇಶ ಇದ್ದಾರೆ ಎಂದರೆ ಸರಿ. ವೆಂಕಟೇಶ ರವರ ಜಮೀನಿನ ಪೂರ್ವಕ್ಕೆ ಶಿವಣ್ಣ ರವರ ಜಮೀನು ಇದೆ ಎಂದರೆ ಸರಿ. ಶಿವಣ್ಣನವರ ಜಮೀನಿನ ಪೂರ್ವಕ್ಕೆ ಸ್ವಾಮಿ ರವರ ಜಮೀನು ಇದೆ ಎಂದರೆ ಸಾಕ್ಷಿಯು ಅವರ ಅಣ್ಣ ತಮ್ಮಂದಿರ ಜಮೀನು ಇದೆ ಎಂದು ನುಡಿಯುತ್ತಾರೆ. ಸ್ವಾಮಿಯ ಜಮೀನು ಎಂದರೆ ಸರಿ.

ಸ್ವಾಮಿಯ ಜಮೀನಿನ ಪೂರ್ವಕ್ಕೆ ಗಣೇಶ ರವರ ಜಮೀನು ಎಂದರೆ ಸರಿ. ನನ್ನ ತಮ್ಮ ಬೊಮ್ಮಯ್ಯ ರವರು 2 ವರ್ಷಗಳಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ದಿಃ 28-02-2012 ರಂದು 1 ನೇ ಪ್ರತಿವಾದಿಯ ಗಂಡ ಈರಯ್ಯ ರವರು ಮೃತರಾದರು ಎಂದರೆ ಸರಿ. ಸದರಿ ದಿನ ಈರಯ್ಯ ರವರನ್ನು 19 ಗುಂಟೆ ಜಮೀನಿನಲ್ಲಿ ಅಂತಿಮ ಸಂಸ್ಕಾರ ಮಾಡಿದರು ಎಂದರೆ ಸರಿ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು